# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 945 (1078) |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 16.12.2025 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ(ತಿದ್ದುಪಡಿ) ಕಾಯಿದೆ, 2025ರ ಮೂಲಕ 4 ಕೆ ಸೇರ್ಪಡೆ ನಿಯಮಗಳನ್ನು ರೂಪಿಸುವಾಗ ಅನುಸರಿಸಿದ ಕಾರ್ಯ ವಿಧಾನಗಳೇನು: ಯಾವ್ಯಾವ ಇಲಾಖೆಗಳೊಂದಿಗೆ ಸಮಾಲೋಚನೆ ಮಾಡಲಾಗಿದೆ: ಸದರಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮಂಡಿಸಿದ ಅಭಿಪ್ರಾಯಗಳಾವುವು: | ಗ್ರಾಮೀಣ ಪ್ರದೇಶಗಳನ್ನು ಯೋಜನಾ ಬದ್ಧವಾಗಿ ರೂಪಿಸುವ ಸಂಬಂಧ ಸರ್ಕಾರದ ಅಧಿಸೂಚನೆ ದಿನಾಂಕ:07-10-2021ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ(ತಿದ್ದುಪಡಿ) ಕಾಯ್ದೆ, 2021 ರಂದು ಪ್ರಕಟಗೊಂಡಿದ್ದು, ಸದರಿ ಅಧಿಸೂಚನೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ (ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳು) ಯನ್ನು ಅಳವಡಿಸಲಾಗಿರುತ್ತದೆ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ಅಡಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಸ್ಥಳೀಯ ಯೋಜನಾ ಪ್ರದೇಶಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಭೂ ಅಭಿವೃದ್ಧಿ) ನಿಯಮಗಳು 2025ನ್ನು ಸಿದ್ಧಪಡಿಸಿ, ಸದರಿ ನಿಯಮಗಳನ್ನು ಕಾನೂನು ಇಲಾಖೆ, ಆರ್ಥಿಕ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನಾ ರಚನಾ ಇಲಾಖೆಯಿಂದ ಪರಿಶೋಧಿಸಿಕೊಂಡು ಸಂಬಂಧಪಟ್ಟ ಇಲಾಖಾ ಸಚಿವರ ಅನುಮೋದನೆಯೊಂದಿಗೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಯೋಜನಾಬದ್ಧವಾಗಿ ರೂಪಿಸುವ ಸಂಬಂಧ ಕರಡು ಅಧಿಸೂಚನೆ ಸಂಖ್ಯೆ:ನಅಇ 16 ಟಿಟಿಪಿ 2023, ದಿನಾಂಕ:30.01.2025 ರಲ್ಲಿ ಕರ್ನಾಟಕ ರಾಜ್ಯಪತ್ರದ ಭಾಗ 4ಎ ರಲ್ಲಿ ದಿನಾಂಕ:14.02.2025 ರಂದು ಪ್ರಕಟಿಸಲಾಗಿತ್ತು.<br><br>ಸದರಿ ಕರಡು ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು ಮತ್ತು ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/16/ಟಿಟಿಪಿ/2023(ಇ), ದಿನಾಂಕ: 07-05-2025ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ ಮತ್ತು ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ:19-05-2025 ರಲ್ಲಿ ಪ್ರಕಟಿಸಲಾಗಿದೆ. |

| | | |
|---|---|---|
| | 94ಸಿ/ಸಿಸಿ ಮನೆ/ನಿವೇಶನ, ಕಂದಾಯ/ಸರಕಾರಿ/ಅರಣ್ಯ ಭೂಮಿ ಭೂನ್ಯಾಯ ಮಂಡಲಿಯಿಂದ ಮಂಜೂರಾದ ಭೂಮಿ, ಡಿಸಿ ಮನ್ನಾ ಇತ್ಯಾದಿ ಭೂಮಿಯಲ್ಲಿರುವ ಇತ್ಯಾದಿಗಳಿಗೆ 4 ಕೆ ನಿಯಮಾವಳಿಗಳು ಅನ್ವಯವಾಗುತ್ತವೆಯೇ: | ಕಟ್ಟಡ ನಿರ್ಮಾಣ ಮಾಡಬೇಕಾದಲ್ಲಿ ಮೊದಲಿಗೆ ವ್ಯವಸಾಯ ಭೂಮಿಯನ್ನು ಭೂಕಂದಾಯ ಕಾಯ್ದೆಯಡಿಯಲ್ಲಿ ಭೂ ಪರಿವರ್ತಿಸಿಕೊಂಡು ನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4-ಕೆ ರನ್ವಯ ಭೂ ಅಭಿವೃದ್ಧಿಗೆ ಅನುಮತಿ ಪಡೆಯಬೇಕಾಗಿರುತ್ತದೆ.<br><br>ಕರಾವಳಿ ಭಾಗದ ಸಾರ್ವಜನಿಕರು ಜಿಲ್ಲಾ ಕೇಂದ್ರಕ್ಕೆ ಅಲೆಯುವ ಸಮಸ್ಯೆಗೆ ತ್ವರಿತವಾಗಿ ಸೇವೆಯನ್ನು ಒದಗಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 292 ಮೈಅಪ್ರಾ 2024, ದಿನಾಂಕ:07-08-2024 ರನ್ವಯ(ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ) ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಸಹಾಯಕ ನಿರ್ದೇಶಕರ ಕಛೇರಿ ಹಾಗೂ ಹತ್ತಿರದ ಯೋಜನಾ ಪ್ರಾಧಿಕಾರಗಳ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ ಹಾಗೂ ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿಯೇ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ. |
| (ಇ) | 4 ಕೆ ಸೇರ್ಪಡೆ ಮಾಡುವಾಗ ಸ್ಥಳೀಯ ಯೋಜನಾ ಪ್ರದೇಶದ ಹೊರತುಪಡಿಸಿದ ಪ್ರದೇಶಗಳಲ್ಲಿ ಮಹಾಯೋಜನೆ ರೂಪಿಸದೆ ಅಡ್ ಹಾಕ್ ಮಾದರಿಯಲ್ಲಿ ತಕ್ಷಣದ ಪರಿಹಾರದ ನೆಲೆಯಲ್ಲಿ ಕ್ರಮವಹಿಸುವ ಅನಿವಾರ್ಯತೆ ಏನಿತ್ತು: ಇದು ಪ್ರಸ್ತುತ ಕರಾವಳಿ ಜಿಲ್ಲೆಗಳಲ್ಲಿ ಸಮಸ್ಯೆ ಸೃಷ್ಟಿಸಿರುವ ವಿಷಯ ಸರಕಾರಕ್ಕೆ ಜನಪ್ರತಿನಿಧಿಗಳ ಮೂಲಕ ತಂದಿದ್ದರೂ ಯಾವುದೇ ಕ್ರಮವಹಿಸದಿರಲು ಕಾರಣವೇನು: | |
| (ಈ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ.ಗ್ರಾ.ಯೋ. ಇಲಾಖೆಯಲ್ಲಿ ವಿನ್ಯಾಸ ಬಡಾವಣೆ ಅನುಮೋದನೆಗೆ ಅನುಸರಿಸುತ್ತಿರುವ ಪ್ರಕ್ರಿಯೆಯಲ್ಲಿ ಏಕರೂಪತೆ ಇಲ್ಲದಿರಲು ಕಾರಣವೇನು: | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಯೋಜನಾಬದ್ಧವಾಗಿ ರೂಪಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 16 ಟಿಟಿಪಿ 2023(E), ದಿನಾಂಕ: 07-05-2025 ರ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ರಾಜ್ಯಾದ್ಯಂತ ಏಕರೂಪವಾಗಿ ವಿನ್ಯಾಸ ಅನುಮೋದನೆಗೆ ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.<br><br>ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಏಕ / ಬಹು ನಿವೇಶನ ವಿನ್ಯಾಸ ಅನುಮೋದನೆ ನೀಡುವ ಕುರಿತು ನಿಯಮಗಳನ್ನು ಸಮನ್ವಯಗೊಳಿಸಲು ಮತ್ತು ಅನುಮೋದನಾ ಪ್ರಕ್ರಿಯೆಯನ್ನು ಸುಗಮಗೊಳಿಸಲು ಹಾಗೂ ವಿನ್ಯಾಸ ಅನುಮೋದನೆಯನ್ನು ಪಾರದರ್ಶಕತೆ ಹಾಗೂ ಜನಸ್ನೇಹಿಯಾಗಿಸಲು ಅನುವಾಗುವಂತೆ Centre for E-Governance ವತಿಯಿಂದ Unified Land Management System ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. |
| (ಉ) | ಉಭಯ ಜಿಲ್ಲೆಗಳಲ್ಲಿ ಬಡಾವಣೆ ಅನುಮೋದನೆಗೆ ಅನುಸರಿಸುತ್ತಿರುವ ಕಾರ್ಯ ವಿಧಾನ ಯಾವುದು: ನಿಗಧಿಪಡಿಸಿದ | ಉಭಯ ಜಿಲ್ಲೆಗಳಲ್ಲಿ ಬಡಾವಣೆ ಅನುಮೋದನೆ ಸಂಬಂಧ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ |

| | | |
|---|---|---|
| | ಅವಧಿಯೆಷ್ಟು; ಸಲ್ಲಿಸಬೇಕಾದ ದಾಖಲೆಗಳಾವುವು: ಕಳೆದ ಒಂದು ವರ್ಷದಲ್ಲಿ ನಿರ್ವಹಿಸಿದ ಒಟ್ಟು ಕಡತಗಳೆಷ್ಟು: ತಿರಸ್ಕರಿಸಿದ್ದೆಷ್ಟು: ವಿಲೆವಾರಿಗೆ ಬಾಕಿಯಿರುವುದೆಷ್ಟು: ಅದಕ್ಕೆ ಕಾರಣಗಳೇನು: ಪ್ರಸ್ತುತ ಪ. ಗ್ರಾ. ಯೋ. ಇಲಾಖೆಯ ಕಚೇರಿಗಳ ಸಿಬ್ಬಂದಿಗಳೆಷ್ಟು? | ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಯೋಜನಾಬದ್ಧವಾಗಿ ಅನುಮೋದನೆ ನೀಡಲಾಗುತ್ತಿದೆ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು, ಸ್ವೀಕರಿಸಿದ ದಿನಾಂಕದಿಂದ 60 ದಿನಗಳೊಳಗೆ ತಾಂತ್ರಿಕ ಅನುಮೋದನೆ ನೀಡಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಈ ಕಛೇರಿಯಿಂದ ದಿನಾಂಕ: 12.09.2025 ರಂದು ಸುತ್ತೋಲೆ ಹೊರಡಿಸಲಾಗಿದೆ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರನ್ವಯ ಅರ್ಜಿದಾರರು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ **ಅನುಬಂಧ-2** ರಲ್ಲಿ ನಮೂದಿಸಿರುವ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.<br><br>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ವಹಿಸಿದ ಒಟ್ಟು ಕಡತಗಳು, ತಿರಸ್ಕರಿಸಿದ ಕಡತಗಳು ಹಾಗೂ ವಿಲೇವಾರಿಗೆ ಬಾಕಿಯಿರುವ ಅರ್ಜಿಗಳ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ.<br><br>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರಸ್ತುತ ನ.ಗ್ರಾ.ಯೋ. ಇಲಾಖೆಯ ಕಚೇರಿಗಳ ಸಿಬ್ಬಂದಿಗಳ ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಿದೆ. |

ಕಡತ ಸಂಖ್ಯೆ:ನಅಇ 537 ಮೈಅಪ್ರಾ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು

ಅನುಬಂಧ-1

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರಾವಳಿ ಭಾಗದಲ್ಲಿ 01 ಎಕರೆವರೆಗೆ ಏಕ ನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಂಬಂಧ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ.

**ಓದಲಾಗಿದೆ:** ಕರಾವಳಿ ಭಾಗದಲ್ಲಿ ಬರುವ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಸತಿ ಮತ್ತು ವಾಣಿಜ್ಯ ಭೂಪರಿವರ್ತಿತ ಜಮೀನುಗಳ ಏಕ ನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿ: 25.07.2024 ರಂದು ಜರುಗಿದ ಸಭೆ.

*****

**ಪ್ರಸ್ತಾವನೆ:**

ಕರಾವಳಿ ಭಾಗದ ಶಾಸಕರು ಈ ಹಿಂದೆ 25 ಸೆಂಟ್ಸ್ ವಿಸ್ತೀರ್ಣವರೆಗಿನ ಜಮೀನುಗಳಿಗೆ ಗ್ರಾಮ ಪಂಚಾಯಿತಿಗಳಿಂದ; 25 ಸೆಂಟ್ಸ್ ಮೇಲ್ಪಟ್ಟು ಒಂದು ಎಕರೆವರೆಗಿನ ಜಮೀನುಗಳಿಗೆ ತಾಲ್ಲೂಕು ಪಂಚಾಯಿತಿಗಳಿಂದ; ಒಂದು ಎಕರೆ ಮೇಲ್ಪಟ್ಟ ವಿಸ್ತೀರ್ಣದ ಜಮೀನುಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ವಿನ್ಯಾಸಗಳಿಗೆ ಅನುಮೋದನೆ ಪಡೆದು ನಮೂನೆ 9 ಮತ್ತು 11 ಗಳನ್ನು ಈ ಹಿಂದೆ ನೀಡಲಾಗುತ್ತಿದ್ದ ಬಗ್ಗೆ ಸಭೆಗೆ ವಿವರಿಸಿ ಪ್ರಸ್ತುತ ಸರ್ಕಾರದಿಂದ ಹೊರಡಿಸಲಾಗಿರುವ ಆದೇಶದ ಹಿನ್ನೆಲೆಯಲ್ಲಿ ಮಿತಿ ಇಲ್ಲದೇ ಎಲ್ಲ ಜಮೀನುಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ವಿನ್ಯಾಸ ಅನುಮೋದನೆ ಪಡೆಯಬೇಕಾಗಿರುವುದರಿಂದ ಕರಾವಳಿ ಭಾಗದಲ್ಲಿನ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಕರಾವಳಿ ಭಾಗದಲ್ಲಿನ ಗ್ರಾಮಪಂಚಾಯಿತಿ ವ್ಯಾಪ್ತಿಯಿಂದ ಜಿಲ್ಲಾ ಕೇಂದ್ರದವರೆಗೆ ಸಾರ್ವಜನಿಕರು ಸಂಪರ್ಕ ಹೊಂದುವ ಸಮಸ್ಯೆಯನ್ನು ನಿವಾರಿಸಲು ಜಿಲ್ಲಾ ಕೇಂದ್ರದೊಂದಿಗೆ ಜಿಲ್ಲೆಯಲ್ಲಿ ವಿವಿಧ ಯೋಜನಾ ಪ್ರಾಧಿಕಾರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸುವುದರೊಂದಿಗೆ ಯೋಜನಾ ಪ್ರಾಧಿಕಾರಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ತೀರ್ಮಾನಿಸಲಾಗಿರುತ್ತದೆ.

ಸದರಿ ಸಭೆಯ ತೀರ್ಮಾನದಂತೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಲು ನಿರ್ಣಯಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ನಅಇ 292 ಮೈಅಪ್ರಾ 2024, ದಿನಾಂಕ:07.08.2024

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-K ಹಾಗೂ 76K ರಡಿ ಪ್ರದತ್ತವಾದ ಅಧಿಕಾರದನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ

ಪಂಚಾಯಿತಿ ವ್ಯಾಪ್ತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಈ ಕೆಳಕಂಡಂತೆ ಅಧಿಕಾರ ವ್ಯಾಪ್ತಿಯನ್ನು ನಿಗಧಿಪಡಿಸಿ ಆದೇಶಿಸಲಾಗಿದೆ.

| ದಕ್ಷಿಣ ಕನ್ನಡ ಜಿಲ್ಲೆ | | |
|---|---|---|
| **ಪ್ರಾಧಿಕಾರ/ ಕಛೇರಿ** | **ಹುದ್ದೆ** | **ವಿಸ್ತರಿಸಿರುವ ಕಾರ್ಯ ವ್ಯಾಪ್ತಿ** |
| ಬಂಟ್ವಾಳ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಬಂಟ್ವಾಳ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಬಂಟ್ವಾಳ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರಗಳು /ಗ್ರಾಮ ಪಂಚಾಯಿತಿಗಳು |
| ಮೂಡಬಿದರೆ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಮೂಡಬಿದರೆ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಮೂಡಬಿದರೆ ಮತ್ತು ಬೆಳ್ತಂಗಡಿ ತಾಲ್ಲೂಕುಗಳಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ಪುತ್ತೂರು ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಪುತ್ತೂರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಪುತ್ತೂರು ಮತ್ತು ಸುಳ್ಯ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಮುಲ್ಕಿ, ಉಲ್ಲಾಳ ತಾಲ್ಲೂಕು ಹಾಗೂ ಮಂಗಳೂರು ತಾಲ್ಲೂಕಿನ (ಸ್ಥಳೀಯ ಯೋಜನಾ ಪ್ರದೇಶಕ್ಕೆ ಒಳಪಡದ) ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |

| ಉತ್ತರ ಕನ್ನಡ ಜಿಲ್ಲೆ | | |
|---|---|---|
| ಪ್ರಾಧಿಕಾರ/ ಕಛೇರಿ | ಹುದ್ದೆ | ವಿಸ್ತರಿಸಿರುವ ಕಾರ್ಯ ವ್ಯಾಪ್ತಿ |
| ಶಿರಸಿ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಶಿರಸಿ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಶಿರಸಿ, ಹಳಿಯಾಳ ಮತ್ತು ದಾಂಡೇಲಿ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಕಾರವಾರ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಶಿರಸಿ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಯಲ್ಲಾಪುರ, ಮುಂಡಗೋಡ ಮತ್ತು ಸಿದ್ದಾಪುರ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |

| ಉಡುಪಿ ಜಿಲ್ಲೆ | | |
|---|---|---|
| ಪ್ರಾಧಿಕಾರ/ ಕಛೇರಿ | ಅಧಿಕಾರ ಪ್ರತ್ಯಾಯೋಜಿಸಿರುವ ಅಧಿಕಾರಿ | ಅಧಿಕಾರ ಪ್ರತ್ಯಾಯೋಜಿಸಿರುವ ತಾಲ್ಲೂಕುಗಳು |
| ಕುಂದಾಪುರ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಕುಂದಾಪುರ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಕುಂದಾಪುರ ಮತ್ತು ಬೈಂದೂರು ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ಕಾಪು ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಕಾಪು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಕಾಪು ಮತ್ತು ಕಾರ್ಕಳ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ |

| | | |
|---|---|---|
| | | ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಉಡುಪಿ, ಬ್ರಹ್ಮಾವರ ಹಾಗೂ ಹೆಬ್ರಿ ತಾಲ್ಲೂಕಿನ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |

ಮೇಲ್ಕಂಡ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಒಳಪಡುವ ಪ್ರತಿ ತಾಲ್ಲೂಕಿನ ಕಾರ್ಯವಾಪ್ತಿಯ ಒಳಗಡೆ ಬರುವ ಪ್ರಕರಣಗಳನ್ನು ಸಕಾಲದಲ್ಲಿ ಇತ್ಯರ್ಥಗೊಳಿಸಲು ನಿರ್ದೇಶಿಸಿದೆ.

**ತಾಲ್ಲೂಕು ಪಂಚಾಯಿತಿ ಕ್ರಮ:**

ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಅಧಿಕಾರಿಗಳಿಗೆ ಕಾರ್ಯನಿರ್ವಹಿಸಲು ಅಗತ್ಯ ಸ್ಥಳಾವಕಾಶ, ಪೀ ಕಂಪ್ಯೂಟರ್, ಸಿಬ್ಬಂದಿ(ಕನಿಷ್ಠ 01 ಪ್ರಥಮ ದರ್ಜೆ ಸಹಾಯಕ/ದ್ವಿತೀಯ ದರ್ಜೆ ಸಹಾಯಕ ಹಾಗೂ 01 ಡಿ ಗ್ರೂಪ್ ನೌಕರ) ಒದಗಿಸುವುದು.

**ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಕ್ರಮ:**

1. ಕ್ರಮ ಕೈಗೊಂಡ ಕಡತದ ಒಂದು ಸಂಪೂರ್ಣ ಪ್ರತಿಯನ್ನು ತಮ್ಮ ಕಛೇರಿಯಲ್ಲಿಯೂ ಸಹ ನಿರ್ವಹಿಸುವುದು.
2. ಕ್ರಮ ಕೈಗೊಂಡ ಕಡತಗಳ ಮಾಸಿಕ ವರದಿಯನ್ನು ಮೈಸೂರು ವಿಭಾಗೀಯ ಕಛೇರಿಗೆ ಸಲ್ಲಿಸುವುದು.
3. ಮೈಸೂರು ವಿಭಾಗೀಯ ಕಛೇರಿಯು ಮಾಸಿಕ ವರದಿಯನ್ನು ಕ್ರೋಢೀಕರಿಸುವುದು.
4. ಮೈಸೂರು ವಿಭಾಗೀಯ ಕಛೇರಿಯು ಕಾಲಕಾಲಕ್ಕೆ ಕಛೇರಿ ತಪಾಸಣೆ ನಡೆಸಿ ಯಾವುದೇ ಕಡತ ಬಾಕಿ ಇಲ್ಲದಂತೆ ಖಾತರಿಪಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

**ಇವರಿಗೆ**

1. ಅಪರ ಮುಖ್ಯಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು, ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.

3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಕೇಂದ್ರ ಕಚೇರಿ, ಬೆಂಗಳೂರು.
4. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಚೇರಿ ಧಾರವಾಡ.
5. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಚೇರಿ, ಬೆಂಗಳೂರು, ಮೈಸೂರು, ಕಲಬುರಗಿ.
6. ರಾಜ್ಯದ ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ.
7. ನಗರ ಯೋಜಕ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರಾಭಿವೃದ್ಧಿ / ಯೋಜನಾ ಪ್ರಾಧಿಕಾರಗಳು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.

## ಅನುಬಂಧ-2

**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರನ್ವಯ ಅರ್ಜಿದಾರರು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.**

1. ಪಹಣಿ ಪ್ರಮಾಣ ಪತ್ರ (RTC)
2. ಮ್ಯುಟೇಷನ್ ರಿಜಿಸ್ಟರ್ ಪ್ರತಿ (MR)
3. ಕ್ರಯಪತ್ರ ಅಥವಾ ಮಾಲೀಕತ್ವವನ್ನು ನಿರೂಪಿಸುವ ಯಾವುದೇ ನೋಂದಾಯಿತ ದಾಖಲೆಯ ಪ್ರತಿ.
4. ಋಣಭಾರ ರಾಹಿತ್ಯ ಪ್ರಮಾಣ ಪತ್ರ (Encumbrance Certificate)
5. ನಿವೇಶನ ಅಥವಾ "ಸಂಯುಕ್ತ ನಿವೇಶನ" (ಒಂದಕ್ಕಿಂತ ಹೆಚ್ಚು ಸರ್ವೆ ಸಂಖ್ಯೆಗಳನ್ನು ಒಳಗೊಂಡಿರುವಾಗ) ದ ಸರ್ವೆ ಸ್ಕೆಚ್/ಅಟ್ಲಾಸ್/PT ಶೀಟ್, ಇದರಲ್ಲಿ "ಖರಾಬ್ ಅ ಮತ್ತು ಬ" ಅನ್ನು ಕಂದಾಯ ಇಲಾಖೆ, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ (DSSLR) ಯ ಅರ್ಹ ಅಧಿಕಾರಿಗಳು ಪ್ರಮಾಣೀಕರಿಸಿರುವ; ಸರ್ವೆಸ್ಕೆಚ್/ ಅಟ್ಲಾಸ್/PT ಶೀಟ್ ನಿವೇಶನ ಸಮೀಪದ ಪ್ರವೇಶ ದಾರಿ/ರಸ್ತೆಗಳ ಅಗಲ ಮತ್ತು ಪ್ರಕಾರ/ವರ್ಗವನ್ನು ತೋರಿಸಬೇಕು, ಅಲ್ಲಿ ನಿಗದಿತ ಪ್ರಮಾಣದ ಪಥ, ಬಂಡಿ ದಾರಿ, ಸಹಜ ಅಥವಾ ಮಾನವ ನಿರ್ಮಿತ ನಾಲೆಗಳು ಮತ್ತು 100 ಮೀಟರ್ ವರೆಗೆ ಟ್ಯಾಂಕ್, ಕೆರೆ ಅಥವಾ ಸರೋವರಗಳು ನಿಗಧಿತ ಮಾಪನದಲ್ಲಿ ಚಿತ್ರಿತವಾಗಿರಬೇಕು.
6. ಕರ್ನಾಟಕ ಭೂ ಕಂದಾಯ ಕಾಯ್ದೆ, 1964 (1964 ರ ಕರ್ನಾಟಕ ಕಾಯ್ದೆ 12) ರ ವಿಧಾನದ ಅಡಿಯಲ್ಲಿ ಅರ್ಹ ಪ್ರಾಧಿಕಾರದಿಂದ ನೀಡಲಾದ ಭೂ ಪರಿವರ್ತನಾ ಆದೇಶದ ಪ್ರತಿ.
7. ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಜಮೀನಿನ ಮಾಲೀಕರು ಒಟ್ಟಾಗಿ ಸೇರಿ ವಿನ್ಯಾಸ ಅಭಿವೃದ್ಧಿಪಡಿಸುವ ಇಚ್ಛೆ ಹೊಂದಿದಲ್ಲಿ ನೋಂದಾಯಿತ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
8. ಗ್ರಾಮ ನಕ್ಷೆ ಮತ್ತು ಖರಾಬ್ ಉತಾರು.
9. ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 16 ಟಿಟಿಪಿ 2023(ಇ), ದಿನಾಂಕ:07-05-2025 ರ ಅಧಿಸೂಚನೆಯಲ್ಲಿ ನಿರ್ದೇಶಿಸಿರುವಂತೆ ಸ್ಥಳ ನಕ್ಷೆ ಹಾಗೂ ಪ್ರಶ್ನಿತ ಜಮೀನಿನ ಪ್ರಸ್ತಾವಿತ ವಿನ್ಯಾಸ ನಕ್ಷೆ.
10. ನಿವೇಶನದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಂದ ಕನಿಷ್ಠ ನಾಲ್ಕು ಛಾಯಾಚಿತ್ರಗಳು, ಸಂಪರ್ಕದ ರಸ್ತೆ/ಬೀದಿ ಮತ್ತು ಲಭ್ಯವಿದ್ದರೆ ಅಸ್ತಿತ್ವದಲ್ಲಿರುವ ಅಭಿವೃದ್ಧಿಗಳೊಂದಿಗೆ, ಲಭ್ಯವಿರುವ ಹಂತದಲ್ಲಿ ಸಮಯ ಹಾಗೂ ಜಿಯೋ-ಟ್ಯಾಗ್ ಸಹಿತವಾಗಿ.
11. ಅಧಿನಿಯಮದ ಕಲಂ 4-Kರ ಅಡಿ ಅನುಮತಿ ಪಡೆಯಲು ಅರ್ಜಿ ಸಲ್ಲಿಸುವ ವ್ಯಕ್ತಿಯ ಛಾಯಾಚಿತ್ರ.
12. ಸಲ್ಲಿಸಿದ ದಾಖಲೆಗಳು ಸತ್ಯವಾಗಿದ್ದು, ಸಂಬಂಧಿಸಿದ ಭೂಮಿ ಯಾವುದೇ ನ್ಯಾಯಾಲಯದ ಪ್ರಕರಣದಲ್ಲಿ ಒಳಪಡುವುದಿಲ್ಲ, ನಿವೇಶನ ಯಾವುದೇ ಭೂ ಸ್ವಾಧೀನ ಕ್ರಮಗಳಿಗೆ ಸೇರಿಲ್ಲ ಹಾಗೂ ಏಕ ನಿವೇಶನ ವಸತಿ ವಿನ್ಯಾಸಕ್ಕಾಗಿ ಪ್ರಸ್ತಾವಿತ ಸ್ಥಳದಲ್ಲಿ ಮಿತವಾಗಿ ನಾಲ್ಕು (4) ವಸತಿ ಘಟಕಗಳು(dwelling units) ಮಾತ್ರ ನಿರ್ಮಿಸಲ್ಪಡುತ್ತವೆ ಎಂದು ಅರ್ಜಿದಾರರು ನೋಟರೀಕೃತ ಪ್ರಮಾಣಪತ್ರ ನೀಡಬೇಕು.
13. ಪುರಾತತ್ವ ಇಲಾಖೆ/ಕರಾವಳಿ ನಿಯಂತ್ರಣ ಪ್ರದೇಶ, ವಿಮಾನ ನಿಲ್ದಾಣ ಪ್ರದೇಶ, ನಿಯಂತ್ರಿತ ಪ್ರದೇಶದ ವ್ಯಾಪ್ತಿಯಲ್ಲಿನ ಜಮೀನುಗಳು ಸಂಬಂಧಿಸಿದ ಇಲಾಖೆಯಿಂದ ಪಡೆದ ನಿರಾಕ್ಷೇಪಣಾ ಪತ್ರ.

ಉಡುಪಿ ಜಿಲ್ಲೆ

| ಕ್ರ. ಸಂ. | ಕಛೇರಿಗಳ ಹೆಸರು | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಕರಡು/ ಅಂತಿಮ ಅನುಮೋದನೆ ನೀಡಿರುವ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ | ವಿಲೇವಾರಿ ಯಾಗಿರುವ ಒಟ್ಟು ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ | ಷರಾ |
|---|---|---|---|---|---|---|---|---|
| 1 | ಸಹಾಯಕ ನಿರ್ದೇಶಕರ ಕಛೇರಿ | 1504 | 793 | 211 | 442+(42 ಶುಲ್ಕ ಪಾವತಿಸಲು ನೋಟಿಸ್ ನೀಡಿರುವ ಪ್ರಕರಣಗಳ ಸಂಖ್ಯೆ) | - | 16 | - |
| 2 | ಕಾಪು ಯೋಜನಾ ಪ್ರಾಧಿಕಾರ | 980 | - | 364 | - | - | 287 | ದಾಖಲೆಗಳನ್ನು ಸಲ್ಲಿಸುವಂತೆ, ಸ್ಥಳ ಪರಿಶೀಲನೆಗೆ, ಶುಲ್ಕ ಪಾವತಿಸಲು ಬಾಕಿ ಇರುವ ಕಡತಗಳು. |
| 3 | ಕುಂದಾಪುರ ಯೋಜನಾ ಪ್ರಾಧಿಕಾರ | 1704 | - | 146 | 141 | - | 29 | - |
| 4 | ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ | 817 | - | - | - | 740 | 73 | - |

| | | | | | | | | |
|---|---|---|---|---|---|---|---|---|
| | | | | | | | | ಮಾಡಿರುವ ನಿವೇಶನಗಳನ್ನು ತಿರಸ್ಕರಿಸಲಾಗಿದೆ.<br>• 2013 ರ ಪೂರ್ವದಲ್ಲಿ ಪಂಚಾಯತಿಯಿಂದ ಪರವಾನಿಗೆ ಪಡೆದು ಕಟ್ಟಡ ನಿರ್ಮಿಸಿರುವ 20 ಕಡತಗಳನ್ನು ತಿರಸ್ಕರಿಸಲಾಗಿದೆ.<br>• ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ನಿಯಮಾವಳಿ ಬಂದ ನಂತರ ನಿರ್ದಿಷ್ಟ ರಸ್ತೆ ಅಗಲಳತೆ ಸಾರ್ವಜನಿಕ ರಸ್ತೆ ಇಲ್ಲದ ಹಾಗೂ ಕನಿಷ್ಟ Frontage ಲಭ್ಯವಿಲ್ಲದೆ ಇರುವ ಕಡತಗಳನ್ನು ತಿರಸ್ಕರಿಸಲಾಗಿದೆ. |

## ಅನುಬಂಧ-3

## ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ವಹಿಸಿದ ಒಟ್ಟು ಕಡತಗಳು, ತಿರಸ್ಕರಿಸಿದ ಕಡತಗಳು ಹಾಗೂ ವಿಲೇವಾರಿಗೆ ಬಾಕಿಯಿರುವ ಕಡತಗಳ ಸಂಖ್ಯೆ ಹಾಗೂ ಅದಕ್ಕೆ ಕಾರಣಗಳು:

### ದಕ್ಷಿಣ ಕನ್ನಡ ಜಿಲ್ಲೆ

| ಕ್ರ. ಸಂ. | ಕಛೇರಿಗಳ ಹೆಸರು | ಸ್ವೀಕೃತ ವಾಗಿರುವ ಅರ್ಜಿಗಳ ಸಂಖ್ಯೆ | ಕರಡು /ಅಂತಿಮ ಅನುಮೋದನೆ ನೀಡಿರುವ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ | ವಿಲೇವಾರಿ ಯಾಗಿರುವ ಒಟ್ಟು ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ | ಷರಾ |
|---|---|---|---|---|---|---|---|---|
| 1. | ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | 1186 | 475 | 143 | 497 | 1115 | 71 | • ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೇ ಜಮೀನನ್ನು ಪರಬಾರೆ ಮಾಡಿರುವ ನಿವೇಶನಗಳನ್ನು ತಿರಸ್ಕರಿಸಲಾಗಿದೆ.<br>• ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ನಿಯಮಾವಳಿ ಬಂದ ನಂತರ ನಿರ್ದಿಷ್ಟ ರಸ್ತೆ ಅಗಲಳತೆ ಇಲ್ಲದ ಹಾಗೂ ಕನಿಷ್ಟ Frontage ಲಭ್ಯವಿಲ್ಲದೆ ಇರುವ ಕಡತಗಳನ್ನು ತಿರಸ್ಕರಿಸಲಾಗಿದೆ. |
| 2. | ಪುತ್ತೂರು ಯೋಜನಾ ಪ್ರಾಧಿಕಾರ | 955 | - | 95 | 182 | - | 33 | - |

| | | | | | | | |
|---|---|---|---|---|---|---|---|
| 3. | ಬಂಟ್ವಾಳ ಯೋಜನಾ ಪ್ರಾಧಿಕಾರ | 2566 | 1944 | - | 63 | - | 74 | • 4ಕ್ಕೆ ನಿಯಮಾನುಸಾರ ಅಗತ್ಯ ದಾಖಲೆಗಳು/ಮಾಹಿತಿಗಳು ಇಲ್ಲದೆ, ಅಪೂರ್ಣವಾಗಿ ಸ್ವೀಕರಿಸಿದ ಅರ್ಜಿಗಳು.<br>• ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೇ ಜಮೀನನ್ನು ಪರಬಾರೆ ಮಾಡಿರುವ ಅರ್ಜಿಗಳು.<br>• 4ಕೆ ನಿಯಮಾನುಸಾರ ಕನಿಷ್ಟ frontage, ನಿರ್ದಿಷ್ಟ ರಸ್ತೆ ಅಗಲ, ಸಾರ್ವಜನಿಕ ರಸ್ತೆ ಇಲ್ಲದ ಕಡತಗಳು.<br>• 2013ರ ಪೂರ್ವದಲ್ಲಿ ಪಂಚಾಯತಿಯಿಂದ ಪರವಾನಿಗೆ ಪಡೆದು ಕಟ್ಟಡ ನಿರ್ವಹಿಸಿರುವ ಕಡತಗಳು ಹಿಂಬರಹ ನೀಡಿದೆ. |
| 4. | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ | 6300 | - | - | - | 5156 | 1144 (ಪರಿಶೀಲನಾ ಹಂತ) | - |
| 5. | ಸುಳ್ಯ ಯೋಜನಾ ಪ್ರಾಧಿಕಾರ | 452 | 285 | 37 | 119 (1 ಶುಲ್ಕ ಪಾವತಿಸಲು ನೋಟಿಸ್ ನೀಡಿರುವ ಪ್ರಕರಣಗಳ ಸಂಖ್ಯೆ) | 442 | 10 | - |
| 6. | ಮೂಡಬಿದ್ರೆ | 2224 | - | 383 | 835 | - | 35 | • ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೇ ಜಮೀನನ್ನು ಪರಬಾರೆ |

## ಉಡುಪಿ ಜಿಲ್ಲೆ

| ಕ್ರ. ಸಂ | ಕಛೇರಿಯ ಹೆಸರು | ಮಂಜೂರಾಗಿರುವ ಹುದ್ದೆಗಳು | | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|
| | | ಪದನಾಮ | ಸಂಖ್ಯೆ | | | |
| 1 | ಕಾಪು ಯೋಜನಾ ಪ್ರಾಧಿಕಾ ರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರು, ಕೆ.ಎಸ್.ಟಿ.ಪಿ.ಬಿ ಇಂದ ಅನ್ಯ ಕರ್ತವ್ಯದ ಮೇಲೆ ಪ್ರಭಾರದಲ್ಲಿರಿಸಲಾಗಿದೆ. ನಗರ ಯೋಜಕರನ್ನು ಸರ್ಕಾರ ನೇಮಿಸಿದ್ದು ಹುದ್ದೆ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 2 | ಕುಂದಾಪುರ ಯೋಜನಾ ಪ್ರಾಧಿಕಾರ | ಸದಸ್ಯಕಾರ್ಯದರ್ಶಿ | 01 | 01 | - | ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ನಗರ ಯೋಜಕರು | 01 | 01 | - | |
| | | ಬೆರಳಚ್ಚುಗಾರರು | 01 | - | 01 | |
| | | ಡಿ ಗ್ರೂಪ್ | 01 | - | 01 | |
| 3 | ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ | ಆಯುಕ್ತರು | 01 | 01 | - | |
| | | ನಗರ ಯೋಜಕ ಸದಸ್ಯರು | 01 | 01 | - | |
| | | ಕಾರ್ಯಪಾಲಕ ಅಭಿಯಂತರರು | 01 | - | 01 | |
| | | ನಗರ ಯೋಜಕರು ಪರ್ಯಾವೇಕ್ಷಕರು | 01 | - | 01 | |
| | | ದ್ವಿತೀಯ ದರ್ಜೆ ಸಹಾಯಕರು | 01 | - | 01 | |
| | | ವಾಹನ ಚಾಲಕರು | 01 | - | 01 | |
| | | ಸೇವಕರು | 02 | 01 | 01 | |

| | | | | | | |
|---|---|---|---|---|---|---|
| 4 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ. | ಸಹಾಯಕ ನಿರ್ದೇಶಕರು | 01 | 01 | - | |
| | | ನಗರ ಯೋಜಕರು | 02 | 02 | - | 01 ನಗರ ಯೋಜಕರು ಇವರ ಸವೆಯನ್ನು ಅನ್ಯ ಕರ್ತವ್ಯದ ಮಲೆ ಸ.ನಿ ಕಾರವಾರ ಕಚೇರಿಗೆ ನೀಡಲಾಗಿದೆ.<br>01 ನಗರ ಯೋಜಕರು ಇವರು ಅನ್ಯ ಕರ್ತವ್ಯದ ಮೇಲೆ ವಾರದಲ್ಲಿ 01 ದಿನ ಕುಂದಾಪುರ ಯೋಜನಾ ಪ್ರಾಧಿಕಾರ. |
| | | ಸಹಾಯಕ ನಗರ ಯೋಜಕರು | 03 | 02 | 01 | 01 ಸಹಾಯಕ ನಗರ ಯೋಜಕರು ನಿಯೋಜನೆ ಮೇರೆಗೆ ತುಮಕೂರು ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.<br>01 ಸಹಾಯಕ ನಗರ ಯೋಜಕರು ನಿಯೋಜನೆ ಮೇರೆಗೆ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. |
| | | ಛಾಯಮುದ್ರಕರು | 01 | - | 01 | |
| | | ಪ್ರಥಮ ದರ್ಜೆ ಸಹಾಯಕರು | 01 | 01 | - | |
| | | ಬೆರಳಚ್ಚುಗಾರರು | 01 | - | 01 | ಹೊರಗುತ್ತಿಗೆ |
| | | ವಾಹನ ಚಾಲಕರು | 01 | 01 | - | |
| | | ಸೇವಕರು | 04 | 01 | 03 | |

| | | | | | | |
|---|---|---|---|---|---|---|
| 5 | ಮೂಡಬಿದ್ರೆ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಯೋಜಕರನ್ನು ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ.<br>ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 6 | ಸುಳ್ಯ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರು, ಮಂಗಳೂರು ಇವರನ್ನು ಅಧಿಕ ಪ್ರಭಾರದಲ್ಲಿರಿಸಲಾಗಿದೆ ಹಾಗೂ ನಗರ ಯೋಜಕರನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಇಂದ ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ. |

## ಅನುಬಂಧ-4

## ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರಸ್ತುತ ನ.ಗ್ರಾ.ಯೋ. ಇಲಾಖೆಯ ಕಚೇರಿಗಳ ಸಿಬ್ಬಂದಿಗಳ ವಿವರಗಳು:

### ದಕ್ಷಿಣ ಕನ್ನಡ ಜಿಲ್ಲೆ

| ಕ್ರ. ಸಂ | ಕಛೇರಿಯ ಹೆಸರು | ಮಂಜೂರಾಗಿರುವ ಹುದ್ದೆಗಳು | | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|
| | | ಪದನಾಮ | ಸಂಖ್ಯೆ | | | |
| 1 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | 01 | 01 | - | ಅಧೀಕ್ಷಕರು, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಚಿತ್ರದುರ್ಗ ಕಛೇರಿಯಲ್ಲಿ ಅನ್ಯ ಕರ್ತವ್ಯದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುತ್ತಾರೆ. ವಾಹನಚಾಲಕರ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ನಗರ ಯೋಜಕರು | 02 | 02 | - | |
| | | ಸಹಾಯಕ ನಗರ ಯೋಜಕರು | 03 | 02 | 01 | |
| | | ಅಧೀಕ್ಷರು | 01 | 01 | - | |
| | | ಪ್ರಥಮ ದರ್ಜೆ ಸಹಾಯಕರು | 01 | - | 01 | |
| | | ಬೆರಳಚ್ಚುಗಾರರು | 01 | - | 01 | |
| | | ಡಿ ಗ್ರೂಪ್ | 02 | - | 02 | |
| 2 | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು | ಆಯುಕ್ತರು | 01 | 01 | - | |
| | | ನಗರ ಯೋಜಕ ಸದಸ್ಯರು | 01 | 01 | - | |
| | | ವಿಶೇಷ ಭೂ ಸ್ವಾಧೀನಾಧಿಕಾರಿಗಳು | 01 | - | 01 | |
| | | ಸಹಾಯಕ ಕಾರ್ಯಪಾಲಕ ಅಭಿಯಂತರರು | 01 | 01 | - | |
| | | ಕಛೇರಿ ಕಾರ್ಯದರ್ಶಿ | 01 | 01 | - | |
| | | ನಗರ ಯೋಜಕರು | 01 | 01 | - | |
| | | ಸಹಾಯಕ ನಗರ ಯೋಜಕರು | 02 | - | 02 | |
| | | ಕಿರಿಯ ಇಂಜಿನಿಯರ್ | 02 | 02 | - | |
| | | ಲೆಕ್ಕಾಧೀಕ್ಷಕರು | 01 | - | 01 | |
| | | ಕಛೇರಿ ವ್ಯವಸ್ಥಾಪಕರು | 01 | 01 | - | |

| | | | | | | |
|---|---|---|---|---|---|---|
| | | ಪ್ರಥಮ ದರ್ಜೆ ಸಹಾಯಕರು | 01 | 01 | - | |
| | | ದ್ವಿತೀಯ ದರ್ಜೆ ಸಹಾಯಕರು | 02 | 02 | - | |
| | | ಮೋಜಣಿದಾರರು | 01 | 01 | - | |
| | | ಕಂದಾಯ ನಿರೀಕ್ಷಕರು | 01 | 01 | - | |
| | | ಶೀಘ್ರಲಿಪಿಗಾರರು | 01 | - | 01 | ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ಬೆರಳಚ್ಚುಗಾರರು | 01 | - | 01 | |
| | | ವರ್ಕ್ ಇನ್ಸ್‌ಪೆಕ್ಟರ್ | 01 | - | 01 | |
| | | ಕಂಪ್ಯೂಟರ್ ಆಪರೇಟರ್ | 01 | - | 01 | |
| | | ವಾಹನ ಚಾಲಕರು | 03 | 01 | 02 | |
| | | ಗ್ರೂಪ್ 'ಡಿ' | 03 | - | 03 | |
| | | ಲಿಫ್ಟ್ ಆಪರೇಟರ್ | 01 | - | 01 | |
| | | ರೇಖಕರು | 01 | - | 01 | |
| | | ಕಾವಲುಗಾರರು | 01 | - | 01 | |
| 3 | ಪುತ್ತೂರು ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯರ ಕಾರ್ಯದರ್ಶಿ ಹುದ್ದೆಗೆ ಮಂಗಳೂರು ಮಹಾನಗರ ಪಾಲಿಕೆಯ ಸಹಾಯಕ ನಿರ್ದೇಶಕರನ್ನು ಅಧಿಕ ಪ್ರಭಾರದಲ್ಲಿರಿಸಿದೆ ಹಾಗೂ ಸಹಾಯಕ ನಗರ ಯೋಜಕರು 01 ಹುದ್ದೆಯನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಕಛೇರಿಯಿಂದ ಅನ್ಯಕರ್ತವ್ಯದ ಮೇಲೆ ನಿಯೋಜಿಸಲಾಗಿದೆ.<br>ದ್ವಿತೀಯ ದರ್ಜೆ ಸಹಾಯಕರು, ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 4 | ಬಂಟ್ವಾಳ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | 01 | - | 01 ಸಹಾಯಕ ನಗರ ಯೋಜಕರನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಇಂದ ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ. ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ಸಹಾಯಕ ನಗರ ಯೋಜಕರು | 01 | - | 01 | |